I will be able to concede. There is no problem. I am prepared to cooperate. My only intention is to see that as many members are given an opportunity to air their views in this forum.

7) ಗಮನ ಸೆಳೆಯುವ ಸೂಚನೆಗಳು

ಅಧ್ಯಕ್ಷರು:- ಮಾನ್ಯ ವಿರೂಪಾಕ್ಷಪ್ಪನವರೇ, ತಾವು ನಿನ್ನೆ ನನ್ನ ಕಛೇರಿಗೆ ಬಂದಿದ್ದಿರಿ. ಮಾತನಾಡುವ ವೇಳೆಗೆ ನಿಮ್ಮದು ಎರಡು ವಿಷಯಗಳನ್ನು ಕೊಟ್ಟಿದ್ದೇನೆಂದು ಹೇಳಿ ನಿಮ್ಮ ಧ್ವನಿಸ್ವಲ್ಪ ಜೋರಾಗಿತ್ತು. ಸಭಾಧ್ಯಕ್ಷರು ಆಗಬಹುದು. ನನ್ನೊಟ್ಟಿಗೆ ಮಾಡನಾಡುವಾಗ ನಾನು ಎಲ್ಲಾ ಸದಸ್ಯರ ಬೇಡಿಕೆಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಅವಕಾಶ ಮಾಡಿಕೊಡುವುದಕ್ಕೆ ಪ್ರಯತ್ನ ಪಡುತ್ತೇನೆ. ಧ್ವನಿ ಏರಿಸಿ ಮಾಡನಾಡತಕ್ಕದ್ದು ಸಾಧುವಲ್ಲ. ಅದನ್ನು ಮಾಡಬಾರದು.

ಶ್ರೀ ಕೆ. ವಿರೂಪಾಕ್ಷ:- ಆ ರೀತಿ ಆಗಿದ್ದರೆ ಕ್ಷಮಿಸಿ ಸಾರ್. ನಾನು ಹತ್ತನೇ ತಾರೀಖು ಕೊಟ್ಟಿದ್ದೆ ಎಂದು ಹೇಳಿದೆ.

ಅಧ್ಯಕ್ಷರು:- ಆಯಿತು, ಏನು ಮಾಡುವುದಕ್ಕೆ ಆಗುತ್ತದೆ. ಹತ್ತಕ್ಕೆ ಕೊಟ್ಟಿದ್ದಾರೆ, ಎಂಟಕ್ಕೆ ಕೊಟ್ಟಿದ್ದಾರೆ. ಎಲ್ಲಾ ಮೆಂಬರ್ಸ್ ಕೊಟ್ಟಿದ್ದಾರೆ. ಎಲ್ಲಾ ಪಾರ್ಟಿಯವರು ಕೊಡುತ್ತಾರೆ. ಸದನ ಇರುವ ವೇಳೆಗೆ ಎಲ್ಲರಿಗೂ ಅವಕಾಶ ಮಾಡಿಕೊಡಬೇಕಾಗುತ್ತದೆ. ನಾನು ಪಕ್ಷ ನೋಡುವುದಿಲ್ಲ. ನಿಮ್ಮ ಹಿನ್ನೆಲೆ ನೋಡುವುದಿಲ್ಲ. ಪ್ರತಿ ಒಬ್ಬರಿಗೂ ನಾನೇ ಕರೆದು ಕರೆದು ಅವಕಾಶವನ್ನು ಮಾಡಿಕೊಡುತ್ತೇನೆ. ಹೇಳಿ, ಮೊನ್ನೆ ನಿಮ್ಮದು ಒಂದು ನೋಟೀಸ್ ಇತ್ತು. ಲ್ಯಾಪ್ಸ್ ಆಯಿತು. ನಾನು ಏನು ಮಾಡಲಿಕ್ಕೆ ಆಯಿತು? ದಯಮಾಡಿ ಪ್ರಸ್ತಾಪ ಮಾಡಿ.

ಶ್ರೀ ಕೆ. ವಿರೂಪಾಕ್ಷಪ್ಪ:- ಸನ್ಮಾನ್ಯ ಅಧ್ಯಕ್ಷರೆ, ನಮ್ಮ ತುಂಗಭದ್ರಾ ಎಡದಂಡೆ ಕಾಲುವೆ ರಾಯಚೂರು ಜಿಲ್ಲೆಯ ರೈತರಿಗೆ ಒಂದು ವರದಾನವಾಗಿದೆ ಎಂದುಹೇಳಿ ನಾವು ಭಾವಿಸಿದ್ದೇವೆ.

ಅಧ್ಯಕ್ಷರು:- ತಾವು ಗಮನವನ್ನು ಸೆಳೆದು ಬಿಡಿ.

ಶ್ರೀ ಕೆ. ವಿರೂಪಾಕ್ಷಪ್ಪ:- ನಾನು ನೀರಾವರಿ ಸಚಿವರು ಗಮನನ್ನು ಸೆಳೆಯುತ್ತಿದ್ದೇನೆ.

ಅಧ್ಯಕ್ಷರು:- ತಾವುಹೇಗೆ ಹೇಳಿ. ತಾವು ವಿಚಾರವನ್ನು ಓದಿ ಬಿಟ್ಟು, ಈ ವಿಚಾರದಲ್ಲಿ ಸರ್ಕಾರದ ಗಮನವನ್ನು ಸೆಳೆದು ಬಯಸುತ್ತಿದ್ದೇವೆ ಎಂದುಹೇಳಿ. ಅವರು ಉತ್ತರ ಓದುತ್ತಾರೆ. ಅವರು ಉತ್ತರವನ್ನು ಓದಿದ ನಂತರ ತಾವು ಸೃಷ್ಟೀಕರಣ ಕೇಳಿ.

ವಿಷಯ :- ತುಂಗಭದ್ರಾ ಎಡದಂಡೆ ನಾಲೆ ಒಡೆದು ಹೋಗಿರುವುದರಿಂದ ಬೆಳೆ ಹಾನಿಯಾಗಿರುವ ಬಗ್ಗೆ

ಶ್ರೀ ಕೆ. ವಿರೂಪಾಕ್ಷಪ್ಪ (ಸಿಂಧನೂರು):- ಮಾನ್ಯ ಅಧ್ಯಕ್ಷರೆ, , 'ತುಂಗಭದ್ರ' ಎಡದಂಡೆ ನಾಲೆಯು ಒಡೆದು ಹೋಗಿರುವುದರಿಂದ ಕಡಲೆ ಮತ್ತಿತರ ಬೆಳೆಗಳಿಗೆ ಹಾನಿಯಾಗಿ ಮುಖ್ಯಮಂತ್ರಿಯವರು ರೈತರ ಬೆಳೆಗಳಿಗೆ ನೀರು ಬಿಡುವ ಭರವಸೆ ನೀಡಿದ್ದರೂ ಇದುವರೆಗೂ ನೀರು ಬಿಡದಿರುವ ಬಗ್ಗೆ ಮಾನ್ಯ ಭಾರೀ ನೀರಾವರಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

★ಶ್ರೀ ಕೆ.ಎನ್. ನಾಗೇಗೌಡ (ಭಾರೀ ನೀರಾವರಿ ಸಚಿವರು):- ತುಂಗಭದ್ರಾ ಎಡದಂಡೆ ಕಾಲುವೆಯ ಮೈಲ್ 29 ರಲ್ಲಿ ದಿನಾಂಕ 17.2.98ರಂದು ಬೆಳಿಗ್ಗೆ 8.00 ಘಂಟೆಗೆ ಒಡೆದಿದ್ದು, ಇದರಿಂದಾಗಿ ಈ ರೀಚ್‌ನ ಕೆಳ ಭಾಗದಲ್ಲಿರುವ ಸುಮಾರು 1,01,170 ಹೆಕ್ಟೇರ್ ಪ್ರದೇಶದಲ್ಲಿ ಬೆಳೆದು ನಿಂತಿರುವ ಬೆಳೆಗಳಿಗೆ ಸ್ವಲ್ಪ ಮಟ್ಟಿಗೆ ತೊಂದರೆ ಆಗಿರುತ್ತದೆ, ಯಾವುದೇ ರೀತಿಯಲ್ಲಿ ಬೆಳೆದು ನಿಂತಿರುವ ಬೆಳೆಗಳ ಹಾನಿಯಾಗುವುದನ್ನು ತಪ್ಪಿಸುವ ಸಲುವಾಗಿ ಹಗಲು-ರಾತ್ರಿ ಒಡೆದು ಹೋದ ಭಾಗವನ್ನು ಸರಿಪಡಿಸಿ ದಿನಾಂಕ 23.2.1998 ರಂದು ಸಂಜೆ 6.00 ಘಂಟೆಗೆ ಹೊತ್ತಿಗೆ ನಿಧಾನವಾಗಿ ಕಾಲುವೆಯಲ್ಲಿ ನೀರನ್ನು ಬಿಡಲಾಯಿತು.

ಕಾಲುವೆಗೆ ಬಿಡಬೇಕಾದ ಪೂರ್ತಿ ಪ್ರಮಾಣವು 3,400 ಕ್ಯೂಸೆಕ್ಸ್, ಕಾಲುವೆಯ ಉದ್ದ 226 ಕಿ.ಮೀ. ಹಾಗೂ ಇರುವ ಉಪ ಕಾಲುವೆಗಳು 106 ಸದರಿ ಕಾಲುವೆಯಡಿ ಹಿಂಗಾರುಹಂಗಾಮಿನಲ್ಲಿ 89,733 ಹೆಕ್ಟೇರ್ನಷ್ಟು ಮಿತ ನೀರಾವರಿ ಕ್ಷೇತ್ರವಿದ್ದು, ಈ ಕ್ಷೇತ್ರವು ಕೇವಲ ಮಿತ ನೀರಾವರಿ ಬೆಳೆಗಳಿಗೆ ಮಾತ್ರ ಮೀಸಲಾಗಿದೆ. ಪ್ರಸ್ತುತ ಹಂಗಾಮಿನಲ್ಲಿ ಈ ಕ್ಷೇತ್ರದಲ್ಲಿ ಸುಮಾರು 73,569 ಹೆಕ್ಟೇರ್ನಷ್ಟು ಭತ್ತದ ಬೆಳೆಗಳನ್ನು ಹಾಗೂ 26,259 ಹೆಕ್ಟೇರ್ನಷ್ಟು ಇತರ ಬೆಳೆಗಳನ್ನು ರೈತರು ಬೆಳೆದಿರುತ್ತಾರೆ. ಹೆಚ್ಚಾಗಿರುತ್ತದೆ. ಹಾಗೂ ಈ ಬೆಳೆಗಳಿಗೆ ಒಟ್ಟಾರೆ ನೀರಿನ ಬೇಡಿಕೆಯ ನಿಗಧಿಗೊಳಿಸಿರುವ ಪ್ರಮಾಣಕ್ಕಿಂತ ಮೂರು ಪಟ್ಟು ಹೆಚ್ಚು ಪ್ರಮಾಣ ಬೇಕಿರುತ್ತದೆ. ಈಗಾಗಲೇ ಕಾಲುವೆಯಲ್ಲಿ ಪೂರ್ಣ ಪ್ರಮಾಣದ ನೀರನ್ನು ಹರಿಯ ಬಿಡುತ್ತಿದ್ದು ಇದಕ್ಕಿಂತಲೂ ಹೆಚ್ಚಿನ ಪ್ರಮಾಣದ ನೀರನ್ನು ಬಿಡಲು ಸಾಧ್ಯವಾಗುವುದಿಲ್ಲ. ಸದರಿ ಕಾಲುವೆಯಲ್ಲಿ ರೊಟೇಶನ್ ಪದ್ದತಿಯನ್ನು ಅಳವಡಿಸಿದ್ದು, ಕಾಲುವೆ ದುರಸ್ಥಿಯಾದ ನಂತರ ಎಲ್ಲಾ ರೈತರು ತಮ್ಮ ತಮ್ಮ ಬೆಳೆಗಳಿಗೆ ಏಕಕಾಲದಲ್ಲಿ ನೀರನ್ನು ಹರಿಸಿಕೊಳ್ಳಲು ಪ್ರಯತ್ನಿಸಿರುವುದರಿಂದ ಇಲ್ಲಿಯವರೆವಿಗೂ ಅಳವಡಿಸಿಕೊಂಡಿದ್ದ ರೊಟೇಶನ್ ಪದ್ಧತಿಯು ನೀರಾವರಿ ಅಧಿಕಾರಿಗಳ ಕೈಮೀರಿ ಹೋಗಿದ್ದು ಅಚ್ಚುಕಟ್ಟುದಾರರುಗಳು ತಾವೇ ಬಂದು ಬಲವಂತವಾಗಿ ಕಾಲುವೆಗಳ ತೂಬುಗಳನ್ನು ಮತ್ತು ವಿತರಣಾ ಕಾಲುವೆಗಳಲ್ಲಿನ ತೂಬುಗಳನ್ನು ಮೇಲಕ್ಕೆತ್ತಿ ಹೆಚ್ಚಿನ ಪ್ರಮಾಣದ ನೀರನ್ನು ಬಳಸಿಕೊಳ್ಳುತ್ತಿರುತ್ತಾರೆ. ಮೇಲ್ಭಾಗದ ಈ ರೈತರುಗಳ ಕ್ರಮದಿಂದಾಗಿ ಮುಖ್ಯ ಭಾಗದ ಕೊನೆಯ ಭಾಗದ ರೈತರು ಹಾಗೂ ವಿತರಣಾ ಭಾಗದ ಕೊನೆಯ ಭಾಗದ ರೈತರಿಗೆ ನೀರಿನ ಪೂರೈಕೆಯಲಿ ತೊಂದರೆ ಉಂಟಾಗಿದೆ. ಹಗಲು-ರಾತ್ರಿ ನೀರಾವರಿ ಅಧಿಕಾರಿಗಳು ಕಂದಾಯ ಇಲಾಖೆಯವರು ಮತ್ತು ಪೋಲೀಸ್ ಇಲಾಖೆಯವರು ಕಾಲುವೆಗಳ ಮೇಲೆ ಗಸ್ತು ತಿರುಗುತ್ತಿದ್ದು ಮೇಲಿನ ನಿಗಧಿತ ಪ್ರಮಾಣದ ನೀರನ್ನು ಸಕಾಲದಲ್ಲಿ ಒದಗಿಸಲು ಸತತ ಪ್ರಯತ್ನಗಳನ್ನು ಮುಂದುವರಿಸಿರುತ್ತಾರೆ. ಈ ಸಂದರ್ಭದಲ್ಲಿ ಸೆಕ್ಷನ್ 144 ಅನ್ನು ಮೈಲ್ 47 ರಿಂದ 128 ರವರೆಗೆ ದಿನಾಂಕ 3.3.1998 ರ ಮಧ್ಯ ರಾತ್ರಿಯಿಂದ ದಿನಾಂಕ 9.3.1998ರವರೆಗೆ ಜಾರಿಗೊಳಿಸಿರುತ್ತಾರೆ ಮತ್ತು ದಿನಾಂಕ 16.3.1998ರವರೆಗೆ ಜಿಲ್ಲಾಧಿಕಾರಿಯವರು ವಿಸ್ತರಿಸಿರುತ್ತಾರೆ. ಅದಾಗ್ಯೂ ದಿನಾಂಕ 9.3.98ರ ಮಧ್ಯ ರಾತ್ರಿಯಲ್ಲಿ ವಿತರಣಾ ನಾಲೆ 85/1 ರ ರೈತರು ತಾವೇ ತೂಬಿನ ಗೇಟನ್ನು ಬಲವಂತವಾಗಿ ಎತ್ತುತ್ತಿದ್ದಾಗ ನೀರಾವರಿ ಹಾಗೂ ಪೋಲೀಸ್ ಅಧಿಕಾರಿಗಳು ರೈತರುಗಳಿಗೆ ಎಚ್ಚರಿಕೆ ನೀಡಿದ್ದಾಗ್ಯೂ ಕೂಡ ಲೆಕ್ಕಿಸದೇ ಕಾನೂನುಬಾಹಿರ ಚಟುವಟಿಕೆಗಳಲ್ಲಿ ರೈತರುಗಳು ತೊಡಗಿದ್ದುದರ ಕಾರಣ ಪರಿಸ್ಥಿತಿಯು ಹತೋಟಿ ಮೀರಿದಾಗ ಪೋಲೀಸ್ ಅಧಿಕಾರಿಗಳು ಲಾಟಿ ಚಾರ್ಜ್ ಮಾಡಿ ಗಾಳಿಯಲ್ಲಿ ಮೂರುಸುತ್ತಿನ ರಬ್ಬರ್ ಗುಂಡುಗಳನ್ನು ಹಾರಿಸಿರುತ್ತಾರೆ. ಇದರಿಂದ ಯಾವುದೇ ಹಾನಿ ಅಥವಾ ತೊಂದರೆ ಆಗಿರುವುದಿಲ್ಲ.

ಸದರಿ ಕಾಲುವೆಯಡಿ ನಿಗಧಿಗೊಳಿಸಲಾಗಿರುವ ಬೆಳೆಗಳನ್ನು ರೈತರುಗಳು ಬೆಳೆದಿದ್ದಲ್ಲಿ ಯಾವುದೇ ರೀತಿಯ ಈಗ ಉದ್ಭವಿಸಿರುವಂತಹ ತೊಂದರೆ ಬರುತ್ತಿರಲಿಲ್ಲ. ಬೆಳೆ ಉಲ್ಲಂಘನೆ ಬಹಳಷ್ಟು ಆಗಿರುವುದರಿಂದ ಹಾಗೂ ಅನಧಿಕೃತ ಬೆಳೆ ಬೆಳೆಯುತ್ತಿರುವುದರಿಂದ ರೈತರುಗಳ ಹೆಚ್ಚಿನ ನೀರನ್ನು ನೀಡುವ ಬೇಡಿಕೆಯನ್ನು ಇಲಾಖೆಯ ನೀಗಿಸಲುಅಸಾಧ್ಯ. ಮೇಲಾಗಿ ಕಾಲುವೆಯಲ್ಲಿ ನಿಗಧಿಗೊಳಿಸಿರುವ ನೀರಿನ ಪ್ರಮಾಣಕ್ಕಿಂತ ಹೆಚ್ಚಿನ ನೀರನ್ನು ಬಿಡಲು ಕಾಲುವೆಯಲ್ಲಿ ಸಾಮರ್ಥ್ಯವಿರುವುದಿಲ್ಲ.

ಮಾನ್ಯ ಶಾಸಕರು ನಾಲೇ ಒಡೆದು ಹೋದ ಮೇಲೆ ನೀರನ್ನು ಕೊಟ್ಟಿಲ್ಲ ಎನ್ನುವ ಹಾಗೂ ಬೆಳೆಗಳು ಸಂಪೂರ್ಣ ಹಾಳಾಗಿವೆ ಎಂಬುದರ ಬಗ್ಗೆ ಮೇಲೆ ತಿಳಿಸಿರುವ ವಾಸ್ತುಸ್ಥಿತಿ ವರದಿ ಅನ್ವಯ ಯಾವುದೇ ರೀತಿಯ ತೊಂದರೆ ಆಗಿಲ್ಲವೆಂದು ಸೃಷ್ಟೀಕರಿಸಲಾಗಿದೆ. ಸದರಿ ನಾಲೆಯಲ್ಲಿ ಇಲ್ಲಿಯವರೆವಿಗೂ ಯಾವುದೇ ಬೆಳೆಯ ಹಾನಿಯಾಗಿರುವುದಿಲ್ಲವೆಂದು ಯೋಜನಾಧಿಕಾರಿಗಳಿಂದ ತಿಳಿದುಬಂದಿರುತ್ತದೆ.

★ಶ್ರೀ ಕೆ. ವಿರೂಪಾಕ್ಷಪ್ಪ :- ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ನೀರಾವರಿ ಮಂತ್ರಿಗಳು ಹೇಳಿರುವಂತೆ ಈ ಒಂದು ಕಾಲುವೆ ಬಿರುಕಿನಿಂದ ಯಾವುದೇ ಬೆಳೆ ಹಾನಿ ಆಗಿಲ್ಲ ಎಂದು ಅಧಿಕಾರಿಗಳಿಂದ ವರದಿ ಬಂದಿದೆ ಎಂದು ಹೇಳಿರುವುದು ಸತ್ಯಕ್ಕೆ ದೂರವಾದಂತಹ ಮಾತು. ಈಗ ಅವರ ಹೇಳಿಕೆಯಿಂದಲೇ ನಾವು ತಿಳಿದುಕೊಂಡಂತೆ ಸುಮಾರು ಫೆಬ್ರವರಿ 17ನೇ ತಾರೀಖು ಈ ಕೆನಾಲ್ ಬಿರುಕಾದ ನಂತರ 25ನೇ ತಾರೀಖಿಗೆ ಕಾಲುವೆಗ ನೀರನ್ನು ಬಿಡಲಾಗಿದೆ. ಆದರೆ 25ರಲ್ಲಿ ಅಲ್ಪ ಪ್ರಮಾಣದ ನೀರನ್ನು ಬಿಟ್ಟು ಒಂದು ವಾರದಲ್ಲಿ ಪೂರ್ಣ ಪ್ರಮಾಣದ ನೀರನ್ನು ಒದಗಿಸಲಾಗಿದೆ. ಹೀಗಾಗಿ ಸುಮಾರು 15- 16 ದಿವಸದವರೆಗೆ ನೀರನ್ನು ಕೊಡಲಿಕ್ಕೆ ಆಗಲಿಲ್ಲ. ಮುಖ್ಯವಾಗಿ ಇದು ಬೇಸಿಗೆ ಕಾಲವಾಗಿರುವುದರಿಂದ ಫೆಬ್ರವರಿ ತಿಂಗಳಲ್ಲಿ ನಮ್ಮ ತುಂಗಭದ್ರಾ ಎಡದಂಡೆ ಕಾಲುವೆ ಎಂದೂ ಕೂಡ ಯಾವ ವರ್ಷದಲ್ಲಿಯೂ ಒಡೆದಿಲ್ಲ, ಇದು ಪ್ರಥಮ ಸಲ - ಫೆಬ್ರವರಿ ತಿಂಗಳಲ್ಲಿ ಒಡೆದಿರತಕ್ಕದ್ದು. ಬೇಸಿಗೆ ಕಾಲವಾಗಿರುವುದರಿಂದ ಸಾಕಷ್ಟು ನೀರನ್ನು ಒದಗಿಸಲಿಕ್ಕೆ ತೊಂದರೆ ಆಗಿದೆ, ನಾನು ಇದನ್ನು ಒಪ್ಪಿಸಿಕೊಳ್ಳುತ್ತೇನೆ. ಆದರೆ ಮುಖ್ಯವಾಗಿ ಈ ಕಾಲುವೆ ಒಡೆಯಬೇಕಾದರೆ ಸ್ವಲ್ಪ ಮಟ್ಟಿಗೆ ಅಧಿಕಾರಿಗಳ ನಿರ್ಲಕ್ಷ್ಯ ಕಾರಣ ಎನ್ನತಕ್ಕದ್ದು ಮೊದಲನೆಯದು. ಇದು ನನ್ನ ದೂರೂ ಕೂಡ ಹೌದು. ಹಾಗೂ ಆ ಭಾಗದ ರೈತರ ದೂರು ಕೂಡ ಹೌದು. ಏಕೆಂದರೆ ಯಾವ 28ನೆಯ ಮೈಲಿಯಲ್ಲಿ ಬಿರುಕು ಬಿಟ್ಟಿದೆ, ಅಲ್ಲಿ ಎರಡು ದಿವಸದ ಮೊದಲೇ ರೈತರು ನೀರು ಬಸಿಯುವುದನ್ನು ಅಧಿಕಾರಿಗಳ ಗಮನಕ್ಕೆ ತಂದರೂ ಕೂಡ ಅಧಿಕಾರಿಗಳು ಈ ಕಡೆಗೆ ಲಕ್ಷ್ಯವನ್ನು ಕೊಟ್ಟಿಲ್ಲ ಎನ್ನತಕ್ಕದ್ದು ನಮ್ಮ ರೈತರ ದೂರು. ಅದಕ್ಕೆ ತಾವು ಇದರ ಬಗ್ಗೆ ಕೂಡ ತನಿಖೆ ಮಾಡಬೇಕು. ಅಲ್ಲದೇ ಇವತ್ತು 25ರಿಂದ 20ನೇ ತಾರೀಖಿನವರೆಗೆ ಸುಮಾರು 25 ದಿವಸ ಕಾಲುವೆಯಲ್ಲಿ ನೀರು ಬಿಟ್ಟಾದರೂ ಕೂಡ ರಾಯಚೂರು ಕೊನೆ ಭಾಗ, ಅಂದರೆ ಮುಖ್ಯ ಕಾಲುವೆಯ ಭಾ ರಾಯಚೂರು ತಾಲ್ಲೂಕು ಆಗಿದೆ. ಅದು ಮೊನ್ನೆ ಒಂದು ದಿವಸ ಅಥವಾ ಎರಡು ದಿವಸದ ಹಿಂದೆ ರಾಯಚೂರು ತಾಲ್ಲೂಕಿಗೆ ನೀರು ಬಿಟ್ಟಿದ್ದಾರೆ. ಮತ್ತು ಇವೊತ್ತು ಪ್ರತಿ ಒಂದು ಉಪ ಕಾಲುವೆಯಲ್ಲಿ ಇದುವರಿಗೂ, ಕೂಡ ಕೊನೆಯ ಭಾಗದ ರೈತರಿಗೆ ನೀರು ಮುಟ್ಟಿಲ್ಲ. ಇವೊತ್ತು ತಾವೇ ಒಪ್ಪಿಕೊಳ್ಳುತ್ತಿದ್ದೀರಿ, ರೆವಿನ್ಯೂ ಅಧಿಕಾರಿಗಳನ್ನು ಇಟ್ಟಿದ್ದೇವೆ, ಪೋಲೀಸ್ ಅಧಿಕಾರಿಗಳನ್ನು ಇಟ್ಟಿದ್ದೇವೆ ಎಂದು ಹೇಳಿ ನೀರಿನ ನಿರ್ವಹಣೆಯನ್ನು ಮಾಡುತ್ತಿದ್ದೇವೆಂದರೂ ಕೂಡ ಇದುವರೆಗೂ ನೀರು ಮುಟ್ಟಿಲ್ಲ. ಇದರಿಂದಾಗಿ ಸುಮಾರು ನಮ್ಮ ಅಂದಾಜಿನ ಪ್ರಕಾರ ಒಂದು ಲಕ್ಷ ಎಕರೆ ಬೆಳೆ ಹಾನಿಗೆ ಒಳಗಾಗಿದೆ. ಸುಮಾರು ಆರು ಲಕ್ಷ ಎಕರೆ ನೀರಾವರಿಗೆ ಒಳಪಟ್ಟಿರುವುದು ತುಂಗಭದ್ರಾ ಎಡದಂಡೆ

ಕಾಲುವೆಯಲ್ಲಿ, ಟೀಲ್ ಎಂಡನ್‌ನಲ್ಲಿರತಕ್ಕ ರೈತರ ಬೆಳೆ ಇವತ್ತು ಹಾನಿಗೆ ಒಳಗಾಗಿದೆ. ಇವತ್ತು ಆ ರೈತರು ಕಂಗಾಲಾಗಿದ್ದಾರೆ. ಇವತ್ತು ಚಳುವಳಿ ನಡೆಯುತ್ತಿದೆ. ಮತ್ತು ಇವತ್ತು ಸಿಂಧನೂರು ತಾಲ್ಲೂಕಿನಲ್ಲಿ ಆಮರಣಾಂತ ಉಪವಾಸ ಮತ್ತು ಸತ್ಯಾಗ್ರಹನಡೆಯುತ್ತಿದೆ. ಇವತ್ತು ಜಿಲ್ಲಾ ಮಂತ್ರಿಗಳು ಇವತ್ತು ಜಿಲ್ಲೆಗೆ ಹೋಗಲಾರದಂತಹ ಪರಿಸ್ಥಿತಿ ಇದೆ. ಅಂತಹ ಪರಿಸ್ಥಿತಿಯನ್ನು ನೀವು ಇಷ್ಟು ಲಘುವಾಗಿ ತೆಗೆದುಕೊಂಡರೆ ಹೇಗೆ? ಇವೊತ್ತು ನಾವು ನೀರನ್ನು ಒದಗಿಸುವುದಕ್ಕೆ ಆಗುವುದಿಲ್ಲ. ಅನ್ ಆಥರೈಸ್ಡ್ ಬೆಳೆ ಇದೆ ಎಂದು ಹೇಳಬಹುದು. ಅನ್ ಆಥರೈಸ್ ಬೆಳೆ ಇವತ್ತಿನದಲ್ಲ, ಹತ್ತಾರು ಇಪ್ಪತ್ತು ವರ್ಷಗಳಿಂದ ಸಹ ಅನ್ ಆಥರೈಸ್ ಬೆಳೆ ಪದ್ಧತಿಯನ್ನು ಬದಲಾವಣೆ ಮಾಡುವುದರ ಮೂಲಕ ಟೀಲ್ ಎಂಡ್ ರೈತರಿಗೆ ಅನುಕೂಲ ಮಾಡಬೇಕು ಎಂದು ಇದ್ದರೆ ನೀವು ಸರ್ಕಾರದಿಂದ ಒಂದು ನಿರ್ಣಯವನ್ನು ತೆಗೆದುಕೊಂಡು ಎಲ್ಲಾ ರೈತರಿಗೆ ಸಮಾನವಾಗಿ ನೀರು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿ. ನಾನು ಒಪ್ಪುತ್ತೇನೆ. ಆದರೆ ಇವೊತ್ತಿನ ಪರಿಸ್ಥಿತಿಯಲ್ಲಿ ಈ ಕಾಲುವೆ ಬಿರುಕಿನಿಂದ ಆಗಿರತಕ್ಕಂಥ ಹಾನಿ ಸುಮಾರು 50 ಕೋಟಿ ಯಿಂದ 100 ಕೋಟಿ ಆಗಬಹುದು ಎನ್ನತಕ್ಕ ಒಂದು ಆಂದಾಜು ಇದೆ. ಇದನ್ನು ನೀವು ಸರ್ವೆ ಮಾಡಿಸಿ. ಸರ್ಕಾರದವರು ಒಂದುಹೇಳಿಕೆ ಮಾಡಿ ಎಂದು ಸದನದಲ್ಲಿ ಹೇಳತಕ್ಕ ವಿಚಾರ ಅಲ್ಲ. ನೀವು ಸರ್ವೇ ಮಾಡಿಸಿ, ಎಷ್ಟು ಹಾನಿ ಆಗಿದೆ? ಅವರಿಗೆ ಕಂದಾಯವನ್ನು ರದ್ದು ಮಾಡುವುದಾಗಲೀ, ಅಥವಾ ನೀರಿನ ಕರವನ್ನು ರದ್ದು ಮಾಡುವುದಾಗಲೀ ಸಹಕಾರ ಸಂಘಗಳ ಸಾಲವನ್ನು ಮಾರ್ಪಡಿಸತಕ್ಕದ್ದು ಆಗಲೀ ರಾಷ್ಟ್ರೀಕೃತ ಬ್ಯಾಂಕುಗಳ ಸಾಲವನ್ನು ಮಾರ್ಪಡಿಸತಕ್ಕದ್ದು ಆಗಲೀ ಆ ಒಂದುದಿಕ್ಕಿನಲ್ಲಿ ತಾವುಯಾವ ಕ್ರಮವನ್ನು ತೆಗೆದುಕೊಳ್ಳುತ್ತೀರಿ ಎಂಬ ಬಗ್ಗೆ ಒಂದು ನಿಖರವಾದಂತಹ ಉತ್ತರವನ್ನು ನಾವು ಸರಕಾರದಿಂದ ಬಯಸುತ್ತಿದ್ದೇವೆ.

11.40 ಎ.ಎಂ.

ಶ್ರೀ ಕೆ. ಎನ್. ನಾಗೇಗೌಡ (ಭಾರೀ ನೀರಾವರಿ ಸಚಿವರು):- ತುಂಗಭದ್ರ ಲೆಫ್ಟ್ ಬ್ಯಾಂಕ್ ಕೆನಾಲ್ ಇಲ್ಲಿಯವರೆವಿಗೆ ಸುಮಾರು 143 ಸಾರಿ ಒಡೆದು ಹೋಗಿದೆ. ನಾನು ವಿವರಗಳನ್ನು ತರಿಸಿ ನೋಡಿದ್ದೇನೆ. ಕಳೆದ ಮೂರು ವರ್ಷಗಳಲ್ಲಿ 5 ಸಾರಿ ಒಡೆದಿದೆ. ಇನ್ನರ್ ಸ್ಟೈನ್ ಡನ್ ವರ್ಕ್ಸ್‌ಗೆ ನಾವು ಇಲ್ಲಿಯವರಿಗೆ ಸುಮಾರು 60 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಅವರು ಹೇಳಿದಂತೆ ನಾನು ನಾಲೆ ಒಡೆದು ಹೋದಾಗ ಬೆಳೆ ಆಗಿಲ್ಲ ಎಂದು ಹೇಳಲಿಲ್ಲ. ನಾವು ನೀರು ಬಿಡದೆ ಬೆಳೆ ನಷ್ಟವಾಗಿದೆ ಎಂದುಹೇಳಿದರಲ್ಲಾ, ಅದರ ಬಗ್ಗೆ ನಾನು ಹೇಳಿದೆ. ನಾನು ತಮಗೆ ಹೇಳುವುದಾದರೆ ಸುಮಾರು ಏಳು ಲಕ್ಷದ ಇಪ್ಪತ್ತೆಂಟು ಸಾವಿರ ಮೊತ್ತದಷ್ಟು ಆ ಮೂರು ಊರಿನಲ್ಲಿ ನಷ್ಟವಾಗಿದೆ. ಅದನ್ನು ನಾನು ಒಪ್ಪಿಕೊಳ್ಳುವುದಕ್ಕೆ ತಯಾರಿದ್ದೇನೆ. ಆ ಬೆಳೆ ನಷ್ಟವಾಗಿದ್ದು ನಾಲೆ ಒಡೆದು ಹೋದಾಗ, ಅದಕ್ಕೆ ಪರಿಹಾರ ಕೊಡುವುದಕ್ಕೆ ಕೇಂದ್ರ ಸರ್ಕಾರ ಪರಿಶೀಲನೆ ಮಾಡುತ್ತದೆ. ಇದು ಒಂದು ವಿಚಾರ. ಆವರೇ ಹೇಳಿದ ರೀತಿಯಲ್ಲಿ ರೋಟೇಷನ್ ಸಿಸ್ಟಮ್ ಇದೆ. ಆ ಸರ್ಕಾರದವರು ನೀರು ವಿತರಣೆ ಮಾಡುವುದಿಲ್ಲ ಇರೀಗೇಷನ್ ಕನ್‌ಸಲ್ಟೇಟಿವ್ ಕಮಿಟಿ ಇದೆ, ಅವರು ಅಲ್ಲಿ ಮೆಂಬರ್ ಆಗಿದ್ದಾರೆ. ಅಲ್ಲಿ ಕೆಲವು ರೋಟೇಶನ್ ಸಿಸ್ಟಮ್‌ನಲ್ಲಿ ಒಂದೊಂದು ಬ್ಲಾಕ್‌ಗೆ ಎಷ್ಟೆಷ್ಟು ದಿವಸ ನೀರು ಬಿಡಬೇಕು ಎಂದು ಆ ಕ್ರಾಪ್ ನೋಡಿಕೊಂಡು ನೀರು ಬಿಡುತ್ತಾರೆ. 9ನೇ ತಾರೀಖಿಗೆ ಅಲ್ಲಿಯ ಕೆಲಸ ಮುಗಿಯಬೇಕಾಗಿತ್ತು. ಕೆಳಗಡೆ ಇರುವವರಿಗೆ ನೀರು ಬಿಡಬೇಕಾಗಿತ್ತು. ಬೆಳಗಿನ ಸಮಯದಲ್ಲಿ ಮೇಲು ಬಾಗದ ರೈತರು ನಮಗೆ ನೀರು ಸಾಕಾಗುವುದಿಲ್ಲ ಎಂದು ಹೇಳಿ ಕೆಳಭಾಗದ ರೈತರಿಗೆ ನೀರು ಬಿಡದೆ ತೂಬನ್ನು ಎತ್ತಿಕೊಂಡಾಗ, ನ್ಯಾಚುರಲಿ ನಾವು ಲಾ ಅಂಡ್ ಆರ್ಡರ್ ಪ್ರಕಾರ ಕೆಳಗಿನ ಭಾಗದ ರೈತರಿಗೆ

ತೊಂದರೆಯಾಗುತ್ತದೆ ಎಂದು ಹೇಳಿ, ನಾವು ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗಿದೆ. ಇದನ್ನು ಅವರೇ ಒಪ್ಪಿಕೊಂಡಿದ್ದಾರೆ. ನಮ್ಮ ಸನ್ಮಾನ್ಯ ಮುಖ್ಯ ಮಂತ್ರಿಗಳ ಆ ಸ್ಥಳಕ್ಕೆ ಹೋಗಿ ಪರಿಶೀಲಿಸಿ, ಇನ್ನು 7-8 ದಿವಸಗಳಲ್ಲಿ ಅಂದರೆ 23 ನೇ ತಾರೀಖಿನ ಹೊತ್ತಿಗೆ ನೀರು ಕೊಡುತ್ತೇವೆ ಎಂದುಹೇಳಿ ಬಂದಿದ್ದರು. ಅವರುಹೇಳಿದಂತೆ ಸರಿಯಾಗಿ 23 ನೇ ತಾರೀಖಿಗೆ ನೀರು ಕೊಟ್ಟಿದ್ದೇವೆ. ತಮಗೆ ಗೊತ್ತಿರುವಂತೆ 3,400 ಕ್ಯೂಸೆಗಿಂತ ಜಾಸ್ತಿ ನೀರು ಅಲ್ಲಿ ಹೋಗುವುದಿಲ್ಲ. ಎರಡನೆಯದಾಗಿ 25-30 ಸಾವಿರ ಹೆಕ್ಟೆರ್‌ಗಿಂತ ಹೆಚ್ಚು ಬೆಳೆ ಹಾಕಿದಾದರೆ. ಈಗ ಹಾಕಬೇಕಾದ ಬೆಳೆ ಬೇರೆ ಇದ್ದರೂ ಸಹ ಭತ್ತವನ್ನು ಹಾಕಿದ್ದಾರೆ. ಅವರನ್ನು ಕೇಳಿದರೆ ಹೇಳುತ್ತಾರೆ, ನಾವು 20-30 ವರ್ಷದಿಂದ ಬೆಳೆಯುತ್ತಿದ್ದೇವೆ ಎಂದು. 20-30 ವರ್ಷದಿಂದ ಇದೇ ಸಮಸ್ಯೆಗಳು ಇವೆ. ಆದಕಾರಣ ನಾನು ಮೇಲ್ಮನೆಯಲ್ಲಿ ಒಂದು ಆಶ್ವಾಸನೆ ಕೊಟ್ಟಿದ್ದೇನೆ. ಈ ವಿಷಯದ ಬಗ್ಗೆ ಏನು ಮಾಡಬೇಕು ಎಂದು ಕೆ.ಸಿ. ರೆಡ್ಡಿಯವರ ರಿಪೋರ್ಟ್‌ನಲ್ಲಿ ಇದೆ.

Sri. M. Basappa:- Every year they are breaking. Because it is a challenge to the Engineers, let him send me, I will give a design, let it break afterwards, because I am an expert in irrigation and also soil mechanics. He says aboout 145 times, it has breached and it has been repaired and it has again breached...

ಶ್ರೀ ಕೆ.ಎನ್. ನಾಗೇಗೌಡ:- ಮಾನ್ಯ ಅಧ್ಯಕ್ಷರೆ, ಇದು ಒಡೆದು ಹೋದ ಸ್ಥಳದಲ್ಲೇ ಒಡೆದುಹೋಗುತ್ತಿಲ್ಲ. ಬೇರೆ ಬೇರೆ ಭಾಗದಲ್ಲಿ ಇದು ಒಡೆದುಹೋಗುತ್ತಿದೆ. ನಾವು ಒಂದು ಸ್ಥಳದಲ್ಲಿ ರಿಪೇರಿ ಮಾಡಿದರೆ, ಇನ್ನೊಂದು ಸ್ಥಳದಲ್ಲಿ ಒಡೆದು ಹೋಗುತ್ತದೆ. ಆದುದರಿಂದ ನಮ್ಮ ಕೆ.ಸಿ. ರೆಡ್ಡಿಯವರು 226 ಕಿ.ಮೀ ನಲ್ಲಿ 43 ಕಿ.ಮೀ ತುಂಬಾ ಕೆಟ್ಟ ಪರಿಸ್ಥಿತಿಯಲ್ಲಿ ಇದೆ ಎಂದು ಸ್ಥಳದಲ್ಲಿ ಇದೆ ಎಂದು ವರಿದ ಮಾಡಿದ್ದಾರೆ. ಪ್ರತೀ ವರ್ಷ ಒಂದಲ್ಲಾ ಒಂದು ಕಡೆ ಒಡೆಯುತ್ತಲೇ ಇರುತ್ತದೆ. ಆದಕಾರಣ ಸನ್ಮಾನ್ಯ ವಿರೂಪಾಕ್ಷಪ್ಪನವರಿಗೆ ಒಟ್ಟಾರೆ ಹೇಳುವುದಾದರೆ ನಾಲೆಗೂ ಸಹ ರಿಪೇರಿ ಆಗಬೇಕು. ಆದಕಾರಣ ನಾನು, ಎಲ್ಲಾ ಶಾಸಕರನ್ನು, ರೈತರನ್ನು ಕರೆಯಬೇದಾಗಿದೆ. ಜಿಲ್ಲಾ ಮಂತ್ರಿಗಳು ಆಗಿರತಕ್ಕಂತಹ ಸನ್ಮಾನ್ಯ ಶ್ರೀ ಮುದ್ದಪ್ಪನವರು, ಸನ್ಮಾನ್ಯ ಶ್ರೀ ಎಂ.ಎಸ್. ಪಾಟೀಲರು, ಸನ್ಮಾನ್ಯ ಪ್ರಕಾಶ್ ಅವರು ಸನ್ಮಾನ್ಯ ವಿರೂಪಾಕ್ಷಪ್ಪನವರು ನಾವು ಎಲ್ಲರೂ ನಿನ್ನೆ ದಿವಸ ಸುಮಾರು ಅರ್ಧ ಮುಕ್ಕಾಲು ಗಂಟೆ ಕಾಲ ಈ ವಿಷಯದ ಬಗ್ಗೆ ಚರ್ಚೆ ಮಾಡಿದ್ದೇವೆ. ಇದಕ್ಕೆ ಕೂಡಲೇ ನಾವು ಏನಾದರೂ ಮಾಡಿ ಒಂದು ಪರಿಹಾರ ಹುಡುಕುತ್ತೇವೆ, ಮಾತ್ತು 4-5 ದಿವಸ ಹೋದರೆ ಟೇಲ ಎಂಡ್‌ಗೆ ನೀರುತಲುಪುತ್ತದೆ. ನಾನು ಈ ವಿಷಯದ ಬಗ್ಗೆ ಡಿ.ಸಿ. ಅವರ ಹತ್ತಿರ, ಮಾಡನಾಡುತ್ತೇನೆ. ಹಾಗೂ ಎಸ್.ಪಿ. ಅವರ ಹತ್ತಿರ, ಮಾತನಾಡಿದ್ದೇನೆ, ಇರಗೇಷನ ಕನ್‌ಸಲಿಟೆಂಟ್ ಆಫೀಸರ್ ಹತ್ತಿರ ಮಾತನಾಡಿದ್ದೇನೆ. ಹಾಗೂ ನಮ ಇಂಜಿನಿಯರ್ಸ್‌ಗೆ ಡೈರೆಕ್ಷನ್ಸ್ ಸಹ ಕೊಟ್ಟಿದ್ದೇನೆ. ಅಲ್ಲಿಹಗಲೂ-ರಾತ್ರಿ ಕೆಲಸ ನಡೆಯುತ್ತಿದೆ. ಇನ್ನೊಂದು ವಾರದಲ್ಲಿ ಟೇಲ್ ಎಂಡ್‌ಗೆ ನೀರು ತಲುಪುತ್ತದೆ ಎಂಬ ಆಶ್ವಾಸನೆಯನ್ನು ಸನ್ಮಾನ್ಯ ವಿರೂಪಾಕ್ಷಪ್ಪನವರಿಗೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ. ವಿರೂಪಾಕ್ಷಪ್ಪ:- ನಮ್ಮ ಸನ್ಮಾನ್ಯ ಮಂತ್ರಿಗಳುಹೇಳಿದಂತೆ 40 ವರ್ಷದಲ್ಲಿ 143 ಸಲ ಕಾಲುವೆ ಬಿರುಕು ಬಿಟ್ಟಿದೆ ಎಂದರೆ , ಅಲ್ಲಿರುವ ರೈತರ ಪರಿಸ್ಥಿತಿ ಹೇಗಿದೆ ಎಂಬುದನ್ನು ನೀವೆಲ್ಲರೂ ಅರ್ಥ ಮಾಡಿಕೊಳ್ಳಬೇಕು.

ಅಧ್ಯಕ್ಷರು:- ಈ ರೀತಿ ಆಗಿದೆ ಎಂದು, ನಾವು ಹೊಸ ಹೊಸ ಇಂಜಿನಿಯರಿಂಗ್ ಕಾಲೇಜು ಹೇಳಿರುವುದು ಸತ್ಯಕ್ಕೆ ದೂರವಾದ ಮಾತು.

Mr. Speaker:- This is calling attention. Please be seated

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಸರ್ ಎಂ. ವಿಶ್ವೇಶ್ವರಯ್ಯನವರ ಕಾಲದಲ್ಲಿ ಈ ರೀತಿ ಆಗುತ್ತಿರಲಿಲ್ಲ.

ಅಧ್ಯಕ್ಷರು:- ಸರ್. ಎಂ. ವಿಶ್ವೇಶ್ವರಯ್ಯನವರು ಎಂತಹ ಇಂಜಿನಿಯರ್? ಈಗ ಬರುತ್ತಿರುವವರೇ ನಿಜವಾದ ಇಂಜಿನಿಯರುಗಳು.

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ :- ಆ ಸಮಯದಲ್ಲಿ ಈ ರೀತಿ ಇಂಜಿನಿಯರಿಂಗ್ ಕಾಲೇಜುಗಳು ಇರಲಿಲ್ಲ.

ಅಧ್ಯಕ್ಷರು:- ಸರ್ ಎಂ. ವಿಶ್ವೇಶ್ವರಯ್ಯನವರಿಗೆ ಬುದ್ಧಿ ಇಲ್ಲ, ಅವರು ಕಟ್ಟಿರುವಂತಹ ನಾಲೆ ಒಂದೂ ಸಲನೂ ಒಡೆಯದೇ ಹೋದರೆ ಅವರು ಎಂತಹ ಇಂಜಿನಿಯರ್?

ಶ್ರೀ ಕೆ. ವಿರೂಪಾಕ್ಷಪ್ಪ:- ಸನ್ಮಾನ್ಯ ಅಧ್ಯಕ್ಷರೆ, ಬಿರುಕು ಬಿಟ್ಟಿರುವ ಜಾಗದಲ್ಲಿ ಮಾತ್ರ ರೈತರಿಗೆ ಹಾನಿಯಾಗಿದೆ ಎಂಬ ಮಾತನ್ನು ಸನ್ಮಾನ್ಯ ಮಂತ್ರಿಗಳು ಹೇಳಿದರು. ಆದರೆ ಇವತ್ತಿಗೆ 25 ದಿವಸ ಆದರೂ ಸಹ ಕೊನೆ ಭಾಗದ ರೈತರಿಗೆ ನೀರು ಮುಟ್ಟಿಲ್ಲ. ಈ ರೀತಿ ಇರುವಾಗ ಬೆಳೆಯಾಗಲಿ, ಕಡ್ಲೆಕಾಯಿ ಬೆಳೆಯಾಗಲಿ 25 ದಿವಸ ಈ ಬೇಸಿಗೆಯಲ್ಲಿ ನೀರು ಇಲ್ಲದೆ ಉಳಿಯುವುದಕ್ಕೆ ಸಾಧ್ಯವೇ ಎಂಬ ಮಾತನ್ನು ಅವರು ಹೇಳಬೇಕು. ನಾನುಹೇಳುವಂತಹ ವಿಷಯವೇನೆಂದರೆ, ವ್ಯವಸಾಯ ಇಲಾಖೆಯವರಿಂದ ಸರ್ವೆ ಮಾಡಿಸಿ, ಎಷ್ಟು ಬೆಳೆ ನಷ್ಟವಾಗಿದೆ, ಮತ್ತು ಆ ಭಾಗದ ರೈತರಿಗೆ ಯಾವ ರೀತಿಯಾಗಿ ಪರಿಹಾರ ಕೊಡುತ್ತೀರಿ ಎನ್ನುವುದನ್ನು ತಾವು ಘೋಷಣೆ ಮಾಡಬೇಕು. ಮತ್ತು ಈಗಾಗಲೇ ಸನ್ಮಾನ್ಯ ನಾಗೇಗೌಡರು ಈ ಕಾಲುವೆ ದುಸ್ಥಿತಿ ಹೇಗಿದೆ ಎಂಬ ವಿಷಯವನ್ನು ಸಹ ಹೇಳಿದರು. ನಾನು ಸಹ ಮೂರು ನಾಲ್ಕು ವರ್ಷದಿಂದ ನೋಡುತ್ತಿದ್ದೇನೆ. ಪ್ರತಿ ವರ್ಷ ಮೂರುನಾಲ್ಕು ಸಲ ಬಿರುಕು ಬಿಡುವಂತಹದ್ದು, ರೈತರ ಬೆಳೆ ಹಾನಿಗೊಳಗಾಗುವಂತಹದ್ದು ಸತತವಾಗಿ ನಡೆದುಕೊಂಡು ಬಂದಿರುವಂತಹದ್ದು. ಆದರೆ ನಾವು ಪ್ರತಿ ವರ್ಷ ಒತ್ತಾಯ ಮಾಡುತ್ತಿದ್ದೇವೆ, ಆದರೆ ಮೂರು ವರ್ಷದಿಂದ ತಮ್ಮ ಬಜೆಟ್‌ನಲ್ಲಿ ಒಂದು ಪೈಸಾ ಕೂಡ ಎಡದಂಡೆ ಕಾಲುವೆಗೆ ಇಡುತ್ತಿಲ್ಲಾ ಎಂದರೆ ನಿಮ್ಮ ರಿಪೇರಿ ಎಷ್ಟರ ಮಟ್ಟಿಗೆ ಇದೆ ಎಂಬುದು ನಮ್ಮ ಅನುದಾನದ ಪ್ರಶ್ನೆ, ಇದು ಒಂದು. ಎರಡನೆಯದಾಗಿ 1996ರಲ್ಲಿ ಎಡದಂಡೆ ಕಾಲುವೆ 11ನೇ ಮೈಲಿನಲ್ಲಿ ಒಂದು ಅಕ್ವಿಡೆಕ್ಟ್ ಕಿತ್ತು ಹೋಗಿದ್ದಂತಹ ಸಮಯದಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಗಳು ಆ ಸ್ಥಳಕ್ಕೆ ಭೇಟಿ ಕೊಟ್ಟಿದ್ದರು. ಆ ಸಮಯದಲ್ಲಿ ಎಲ್ಲಾ ಶಾಸಕರು ಅವರ ಹತ್ತಿರ ಹೋಗಿ ಸ್ವಾಮಿ, ಭದ್ರಾ ಕಾಲುವೆಯನ್ನು ಭದ್ರ ಪಡಿಸಬೇಕು ಎಂದು ನಾವು ವಿನಂತಿ ಮಾಡಿಕೊಂಡಾಗ, ಅವರು ಅದಕ್ಕೆ ಒಪ್ಪಿಕೊಂಡರು, ಮತ್ತು ನಾವು ಇದಕ್ಕೆ ಸ್ಪೆಷಲ್ ಗ್ರಾಂಟ್ ಕೊಡುತ್ತೇವೆ, ಆದರೆ ನಿಮ್ಮ ರೈತರು ಒಂದು ವರ್ಷ ಬೆಳೆ ಬಿಡಬೇಕು ಎಂದು ಹೇಳಿದರು, ಅದಕ್ಕೆ ನಾವು ಒಪ್ಪಿಕೊಂಡಿದ್ದೇವೆ. ಅದರ ಪ್ರಕಾರ ಒಂದು ಯೋಜನೆಯನ್ನೂ ಸಹ ತಯಾರು ಮಾಡಿದ್ದೇವೆ, ಅದು ಸರ್ಕಾರದ ಮುಂದು ಬಂದಿದೆ. ಆದರೆ ಮೂರು ವರ್ಷ ಆದರೂ ಸರ್ಕಾರಕ್ಕೆ ಇದರ ಕಡೆ ಲಕ್ಷ್ಯ ಇಲ್ಲ. ಆದರೆ ಪ್ರತಿ ವರ್ಷ ಈ ರೀತಿ ಕಷ್ಟವನ್ನು, ಹಾನಿಯನ್ನು ಅನುಭವಿಸಲಿ ಎನ್ನುವುದು ಈ ಸರ್ಕಾರದ ಉದ್ದೇಶವೇನಾದರೂ ಇದೆಯೇ ಅಥವಾ ಈಗಾಗಲೇ ಅವರುಹೇಳಿದರು

ಇದನ್ನು ಬಲಪಡಿಸಬೇಕು, ಇದು ವೀಕ ಇದೆ, ಈ ಪರಿಸ್ಥಿತಿ ಪ್ರತಿ ವರ್ಷ ಉಂಟಾಗುತ್ತದೆ ಎಂಬ ಮಾತನ್ನು ಮಾನ್ಯ ನೀರಾವರಿ ಮಂತ್ರಿಗಳು ಒಪ್ಪಿಕೊಳ್ಳುತ್ತಾರೆ. ಆದರೆ ಇದನ್ನು ಬಲಪಡಿಸುವುದಕ್ಕೆ ಅವರ ಪ್ರಯತ್ನವೇನು? ನಮ್ಮ ರಾಜ್ಯದ ನೀರಾವರಿ ಮಂತ್ರಿಗಳಾದ ಸನ್ಮಾನ್ಯ ಶ್ರೀ ನಾಗೇಗೌಡರು ಯಾವ ಯು.ಸಿ. ಕೆನಾಲ್, ಹೇಮಾವತಿ, ಅಥವಾ ಕಾವೇರಿಗೆ ಎಷ್ಟು ಆಸಕ್ತಿ ತೋರಿಸುತ್ತಾರೋ, ಅದೇ ರೀತಿಯಾಗಿ ಎಡದಂಡೆ ಕಾಲುವೆಗು ಸಹ ಆಸಕ್ತಿ ತೋರಿಸಿ ರಿಪೇರಿ ಮಾಡಿಸುವುದಕ್ಕೆ ಭರವಸೆ ನೀಡಬೇಕು; ಮತ್ತು ರೈತರಿಗೆ ಯಾವ ರಿತಿ ಪರಿಹಾರವನ್ನು ಒದಗಿಸುತ್ತೀರಿ; ಅಂದರೆ, ನೀರಿನ ಕರ ಮಾಲ್ ಗುಜಾರಿ ಮತ್ತು ಸಹಕಾರ ಸಂಘಗಳ ಸಾಲದ ಬಗ್ಗೆ ಕೂಡ ತಾವು ಒಂದು ಭರವಸೆಯನ್ನು ಕೊಡಬೇಕು ಎಂದುನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ:- ಅದನ್ನು ಶಾಶ್ವತವಾಗಿ ಬಲಪಡಿಸಬೇಕು ಎಂದು ಕೆ.ಸಿ. ರೆಡ್ಡಿಯವರ ರಿಪೋರ್ಟ್ ನಲ್ಲಿ ಇದೆ. ಅದಕ್ಕೆ ಯಾವ ರೀತಿಯಾಗಿ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು, ಆ ಭಾಗದಲ್ಲಿರುವಂತಹ ಎಲ್ಲಾ ಶಾಸಕರನ್ನು, ರೈತರನ್ನು ಕರೆದು ತೀರ್ಮಾನ ತೆಗೆದುಕೊಳ್ಳುತ್ತೇವೆ. ಎರಡನೆಯದಾಗಿ ಕಳೆದ ವರ್ಷ ಬಜೆಟ್‌ನಲ್ಲ ಹಣ ಇಲ್ಲದೆ ಹೋದರು ಸಹ 11 ಕಿ.ಮೀ ನಾಲೆ ಒಡೆದು ಹೋದಾಗ ಸುಮಾರು 10 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, ಅಕ್ವಡ್‌ಕ್ಟ್‌ಗಳನ್ನು ರಿಪೇರಿ ಮಾಡಿಸಿದ್ದೇವೆ. ಮೂರನೆಯದಾಗಿ, ಬಜೆಟ್ ಇಲ್ಲ ಎಂದು ನಿನ್ನೆ ದಿವಸ ರೀ ಅಪ್ರೋಪ್ರಿಯೇಟ್ ಮಾಡಿ, ಈ ವರ್ಷ 12 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕು ಎಂದು ಆಲೋಚನೆ ಮಾಡಿದ್ದೇವೆ. ಈ ವಿಚಾರವನ್ನು ಹಣಕಾಸಿನ ಸಚಿವರ ಹತ್ತಿರ ಮಾನ್ಯ ಶ್ರೀ ಪ್ರಕಾಶ್‌ರವರು ಮಾಡನಾಡಿದ್ದಾರೆ. ನಾಲ್ಕನೆಯದಾಗಿ, ಕೊನೆ ಭಾಗದಲ್ಲಿ ನಷ್ಟವಾಗಿದೆ ಎಂದು ಹೇಳಿದ್ದಾರೆ. ಆದಕಾರಣ ನಾನು ವ್ಯವಸಾಯ ಇಲಾಖೆಗೆ ವಿನಂತಿ ಮಾಡಿ, ಅವರಿಗೆ ನಿರ್ದೇಶನ ಕೊಟ್ಟು ಅವರಿಗೆ ಬೆಳೆ ಎಷ್ಟು ನಷ್ಟವಾಗಿದೆ ಎಂಬ ಅಂದಾಜು ಮಾಡಿಸುತ್ತೇನೆ ಎಂಬ ಮಾತನ್ನು ಹೇಳಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು):- ಸುಮಾರು 10-15 ವರ್ಷಗಳ ಹಿಂದೆ ಕೆ.ಸಿ. ರೆಡ್ಡಿಯವರು ರಿಪೋರ್ಟ್ ಕೊಟ್ಟಿರುವುದು, ಆದರಲ್ಲಿ ಒಂದು ಟೈಂ ಲಿಮಿಟ್ ಹಾಕಿದ್ದಾರೆ. 5-6 ವರ್ಷದಲ್ಲಿ ಯಾವ ರೀತಿ ಮಾಡಬೇಕು ಎಂದು. ಆದುದರಿಂದ ಆ ರಿಪೋರ್ಟ್ ತಾವು ಇಂಪ್ಲಿಮೆಂಟ್ ಮಾಡಬೇಕು ಎಂದರೆ, ಅದಕ್ಕೆ ಬಜೆಟ್ ಪ್ರಾವಿಷನ್ ಬೇಕು. ಆದರೆ ಈಗ ಒತ್ತಾಯದ ಮೇರೆಗೆ ಅಥವಾ ತಾತ್ಕಾರ್ತಿಕವಾಗಿ ತಾವು ರೀ ಅಪ್ರೋಪ್ರಿಯೇಟ್ ಮಾಡಿಕೊಂಡಿರಬಹುದು. ಆದರೆ ಪರ್ಮನೆಂಟಾಗಿ ಆ ರಿಪೋರ್ಟ್ ಪ್ರಕಾರ ರಿಪೋರ್ಟ್ ಇಂಪ್ಲಿಮೆಂಟ್ ಮಾಡಬೇಕು ಎಂದರೆ, ಅದನ್ನು ಸ್ಟ್ರೆಂಗ್‌ನ್ ಮಾಡಬೇಕು ಎಂದರೆ, ಹಣ ಒದಗಿಸಬೇಕಾದರೆ, ಅದಕ್ಕೆ ತಾವು ಈ ವರ್ಷ ಹಣವನ್ನು ಒದಗಿಸಿ ಆ ರಿಪೋರ್ಟ್ ಇಂಪ್ಲಿಮೆಂಟ್ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೀರೋ ಹೇಗೆ?

ಶ್ರೀ ಕೆ.ಎನ್. ನಾಗೇಗೌಡ:- ಕೆ.ಸಿ. ರೆಡ್ಡಿ ಅವರ ರಿಪೋರ್ಟ್ ಬಂದು ಸುಮಾರು ಎರಡು ವರ್ಷಗಳಾಯಿತು. ಆದರಲ್ಲಿ ಕೆಲವು ರ್ ಪೋರ್ಷನ ಟ್ಯಾಕಲ್ ಮಾಡಿದ್ದೇವೆ. 226 ಕಿ.ಮೀ.ನಿಲ್ಲಿ 43 ಕಿ.ಮೀ ತುಂಬಾ ಅಪಾಯದ ಸ್ಥಿತಿಯಲಿ ಇದೆ ಎಂಬುದನ್ನು ಕೆ.ಸಿ. ರೆಡ್ಡಿಯವರ ರಿಪೋರ್ಟ್‌ನಲ್ಲಿ ಕೊಟ್ಟಿದ್ದಾರೆ. According to his report for inner strengthen work we have spent Rs. 60 crores and remaining Rs. 50 Crores are required..

ಎಂದು ಹೇಳಿದ್ದಾರೆ. ಆದಕಾರಣ ಈ ವರ್ಷ ರೀ ಅಪ್ರೊಪ್ರಿಯೇಟ್ ಮಾಡಿಕೊಂಡು ನಾವು 10-11 ಕೋಟಿ ರೂ. ಖರ್ಚು ಮಾಡುತ್ತೇವೆ ಎಂದು ಹೇಳಿದ್ದೇವೆ. ಇನ್ನು ಎರಡು ವರ್ಷದಲ್ಲಿ ಕೆ.ಸಿ. ರೆಡ್ಡಿಯವರ ವರದಿಯನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸುತ್ತೇವೆ ಎಂದು ಸನ್ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಹೇಳಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಈಗ ನೀರಂತೂ ಕೊಟ್ಟಿಲ್ಲ. ಬ್ರೀಚ್ ಆಗಿರುವುದರಿಂದ ಅಟ್‌ಲೀಸ್ಟ್, ವಾಟರ್ ರೇಟ್ ಮತ್ತು ಲ್ಯಾಂಡ್ ರೆವಿನ್ಯೂ ಇವುಗಳಿಗಾದರೂ ರಿಯಾಯಿತಿ ನೀಡುವಿರಾ?

ಶ್ರೀ ಕೆ.ಎನ್. ನಾಗೇಗೌಡ:- ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಗೆ ಮತ್ತು ಸನ್ಮಾನ್ಯ ವಿರೂಪಾಕ್ಷಪ್ಪನವರಿಗೆ ಚೆನ್ನಾಗಿ ತಿಳಿದಿದೆ. ಲಾಸ್ಟ್ ಟೇಲ್ ಎಂಡ್‌ನಲ್ಲ ಸ್ವಲ್ಪ ಭಾಗದಲ್ಲಿ ನೀರಿಗೆ ತೊಂದರೆಯಾಯಿತು. ಆದರೆ 20 ದಿವಸಕ್ಕೆ ಕೊಡುವುದಕ್ಕೆ ಬದಲಾಗಿ 24 ದಿವಸಕ್ಕೆ ಕೊಟ್ಟಿದ್ದೇವೆ. ನಾನು ಡಿ.ಸಿ. ಅವರ ಹತ್ತಿರ, ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ಅವರ ಹತ್ತಿರ, ಇನ್‌ಕ್ಲೂಡಿಂಗ್ ಆಲ್ ಪೋಲೀಸ್ ಆಫೀಸರ್, ರೆವಿನ್ಯೂ ಆಫೀಸರ್, ಇರಿಗೇಷನ್ ಆಫೀಸರ್ ಹತ್ತಿರ ನಿನ್ನೆ ಬೆಳಿಗ್ಗೆ, ಮತ್ತು ಇವತ್ತು ಬೆಳಿಗ್ಗೆ ಮಾಡನಾಡಿದ್ದೇನೆ.

Nearlyabout 10 percent in the last tail-end of the canal...

ಸ್ವಲ್ಪ ಪ್ರಾಬ್ಲಂ ಇದೆ ಎಂದುಹೇಳಿದ್ದೇನೆ. ಅದನ್ನು ಖಂಡಿತವಾಗಿ ಸರಿಪಡಿಸುತ್ತೇವೆ.

ಮಾನ್ಯ ಸದಸ್ಯರು:- ಸರ್ವೆ ಮಾಡಿಸಬೇಕು.

ಶ್ರೀ ಕೆ.ಎನ್. ನಾಗೇಗೌಡ :- ಸರ್ವೆ ಮಾಡಿಸುತ್ತೇವೆ. ಸರ್ವೆ ಮಾಡಿ what will be the next step ಎಂದು ತಿಳಿಸುತ್ತೇನೆ.

(ಅ) <u>ಗುಲ್ಬರ್ಗ ಜಿಲ್ಲೆಯ ಅಫ್ಜಲ್‌ಪುರ ತಾಲೂಕು ಬಡಾಳ್ ಗ್ರಾಮ ನಿವಾಸಿಯಾದ ಶ್ರೀ ಬಿಲ್ ಫೇಮಸ್ ಮಾಶಾಳ್ ಕಾಣೆಯಾಗಿರುವ ಬಗ್ಗೆ</u>

ಶ್ರೀ ಸೈಯದ್ ಜುಲ್ಫೀಯವರ ಹಸ್ಕಿ: ಅಧ್ಯಕ್ಷರೇ, ಮೇಲಿನ ವಿಷಯದ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತೇನೆ.

★ಶ್ರೀ ಎಂ.ಸಿ. ನಾಣಯ್ಯ(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):- ಅಧ್ಯಕ್ಷರೇ, ಗುಲ್ಬರ್ಗಾ ಜಿಲ್ಲೆ ಅಫಜಲ್‌ಪುರ ತಾಲ್ಲೂಕು ಬಡದಾಳ ಗ್ರಾಮದ ಶ್ರೀಮತಿ ಶಾರದಾಬಾಯಿ, ಕೋಂ ಪ್ರಧಾನ ಮಾಶಾಳ ಇವರು ತಮ್ಮ ಪತಿ ಶ್ರೀ ಪ್ರಧಾನ ಅಲಿಯಾಸ್ ಬಿಲ್ ಫೇಮಸ್ ಮಾಶಾಳ ಇವರು ಕಾಣೆಯಾದ ಬಗ್ಗೆ ಅಫಜಲ್‌ಪುರ ಪೋಲೀಸ್ ಠಾಣೆಗೆ ನೀಡಿದ ದೂರಿನ ಆಧಾರದ ಮೇಲೆ ದಿನಾಂಕ 28-12-1998 ರಂದು ಮೊಕದ್ದಮೆ ಸಂಖ್ಯೆ : 22:98 ಕಲಂ ಮನುಷ್ಯ ಕಾಣೆಯಾಗಿದ್ದಾರೆ ರಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆಯನ್ನು ಕೈಗೊಂಡಿರುತ್ತದೆ. ಈ ಪ್ರಕರಣದ ಸಂಕ್ಷಿಪ್ತ ವಿವರಣೆ ಏನೆಂದರೆ, ಶ್ರೀ ಪ್ರಧಾನ ಅಲಿಯಾಸ್ ಬಿಲ್ ಫೇಮಸ್ ಮಾಶಾಳ ಇವರು ದಿನಾಂಕ 18-1-1998 ರಂದು ಬಡದಾಳ ಗ್ರಾಮದಿಂದ ಕಾಣೆಯಾಗಿದ್ದು, ಅವರ ಕಾಣೆಯ ಬಗ್ಗೆ ಕೆಲವು ವ್ಯಕ್ತಿಗಳ ಕೈವಾಡ ಇಬಹುದೆಂದು ಅವರ ಪತ್ನಿ ದೂರಿನಲ್ಲಿ ತಿಳಿಸಿರುತ್ತಾರೆ. ಶ್ರೀ ಮಲ್ಲಿಕಾರ್ಜುನಪ್ಪ, ಪೋಲೀಸ್